ಮುಂದೆ ಇರುವುದಕ್ಕೂ, ಎಲ್ಲೋ ಕಣ್ಣು ಕಾಣದ ಜಾಗದಲ್ಲಿರುವುದಕ್ಕೂ ವ್ಯತ್ಯಾಸವಿಲ್ಲವಾ?

'ತಮಾಷಿ ಅಂದ್ಕಂಡಿದೀಯಾ ಅಪ್ಪ? ಹತ್ತು ರೂಪಾಯಿ ಸಿಗುತ್ತೆ ಅಂದ್ರೆ ತಲೆ ಒಡೆಯೋ ಕಾಲ. ಮನೆಗೆ ಕೆಲಸದವಳು ಬರ್ತಾಳೆ. ಯಾರನ್ನೂ ನಂಬೋ ಕಾಲ ಅಲ್ಲ. ಬೆಲೆಬಾಳೋದು ಏನಿದ್ರೂ ಎಲ್ಲಾ ಲಾಕರ್‌ನಲ್ಲೇ ಇಡೋದು...' ಪ್ರಸನ್ನ ಅಪ್ಪನಿಗೆ ಮನವರಿಕೆ ಮಾಡಿಸಿದ್ದ.

'ಬೇಕು ಅಂತಾದ್ರೆ ಹೋಗಿ ತಗೊಂಡ್ಬರ್ಬೇಕಲ್ಲ? ಅದೊಂದು ರಗಳೆ...' ಕುಂಯ್ಗುಟ್ಟಿದ್ದ ಶಿವರಾಮ.

'ರಗಳೇನೂ ಇಲ್ಲ, ಎಂತದೂ ಇಲ್ಲ. ನಂಗೆ ಮೈಮೇಲಿರೋದು ಸಾಕೇ ಸಾಕು. ಮತ್ಯಾಕೆ ಬೇಕಾಗುತ್ತೆ ಒಡವೆ? ಪ್ರಸನ್ನನ ಮದುವೆ ಹೊತ್ತಿಗೆ ತಾನೇ? ಆಗ ನೋಡ್ಕಂಡ್ರಾಯ್ತು...'

ಸೀತಾಲಕ್ಷ್ಮಿಯ ಕುತ್ತಿಗೆಯಲ್ಲಿ ಚಿನ್ನದಲ್ಲಿ ಸುತ್ತಿಸಿದ ಎರಡೆಳೆ ಕರಿಮಣಿ ಸರ, ಕಿವಿಗಳಲ್ಲಿ ಕೆಂಪು ಹರಳಿನ ಬೆಂಡೋಲೆ, ಕೈಯಲ್ಲಿ ಒಂದು ಜೊತೆ ಬಳೆ, ದಿನಬಳಕೆಗೆ ಉಪಯೋಗಿಸುತ್ತಿದ್ದ ಅವು ಸೀತಾಲಕ್ಷ್ಮಿಯ ಮೈಮೇಲೆ ಯಾವತ್ತೂ ಇರುವಂತವು. ಅವಷ್ಟು ಸೀತಾಲಕ್ಷ್ಮಿಯ ಮೈಮೇಲೇ ಉಳಿದುಕೊಂಡುವು. ಬಾಕಿ ಉಳಿದಿದ್ದೆಲ್ಲಾ ಲಾಕರ್ ಸೇರಿಕೊಂಡು ಭದ್ರವಾದುವು. ಮನೆಯಲ್ಲಿ ಖಾಲಿ ಕೂತು ಅಭ್ಯಾಸವಿಲ್ಲದ ಶಿವರಾಮ ಮನೆಗೆ ಬೇಕಾದ ದಿನಸಿ, ತರಕಾರಿ ಇತ್ಯಾದಿಗಳನ್ನು ಖರೀದಿಸಿಕೊಂಡು ಬರುವ ಕೆಲಸವನ್ನು ಸ್ವ ಇಚ್ಛೆಯಿಂದ ವಹಿಸಿಕೊಂಡ. ಸೀತಾಲಕ್ಷ್ಮಿಗೆ ಅಡುಗೆ ಮನೆಯ ಕೆಲಸ ಇದ್ದೇ ಇತ್ತು. ಪುರುಸೊತ್ತಾದಾಗ ಟೀವಿ ಧಾರಾವಾಹಿಗಳು. ಸಂಜೆ ಹೊತ್ತು ಹತ್ತಿರದ ದೇವಸ್ಥಾನಗಳ ಭೇಟಿ. ಸಂಕಷ್ಟಿ, ಸತ್ಯನಾರಾಯಣ ಪೂಜೆ ಎಂದು ಸಾಮೂಹಿಕವಾಗಿ ದೇವಸ್ಥಾನಗಳಲ್ಲಿ ನಡೆಸುತ್ತಿದ್ದ ಪೂಜೆಯಲ್ಲಿ ಮಗ ಪ್ರಸನ್ನನ ಹೆಸರಿನಲ್ಲಿ ಸಂಕಲ್ಪ, ಪೂಜೆಗಳಲ್ಲಿ ಭಾಗವಹಿಸುವ ಭಕ್ತಿ. ಅಕ್ಕಪಕ್ಕದ ಕೆಲ ಸಮಾನವಯಸ್ಕರು ಸೀತಾಲಕ್ಷ್ಮಿಗೆ ಪರಿಚಯವಾಗಿದ್ದರು. ಕಂಡಾಗ ಮುಗುಳ್ನಗುವುದಕ್ಕೆ, ಲೋಕಾರೂಢಿಯಾಗಿ ಅಡುಗೆ, ತಿಂಡಿಗಳ ಕುರಿತು ವಿಚಾರಿಸುವುದಕ್ಕೆ ಸೀಮಿತವಾಗಿದ್ದ ಪರಿಚಯ ಹಬ್ಬ ಹರಿದಿನಗಳಲ್ಲಿ ಅರಿಶಿನ, ಕುಂಕುಮಕ್ಕೆ ಆಹ್ವಾನಿಸುವಷ್ಟು ಮುಂದುವರಿದಿತ್ತು.

'ಈ ಪೇಟೆ ಜನ ಎಷ್ಟೊಂದು ಹಬ್ಬ ಮಾಡ್ತಾರೆ ಮಾರಾಯ್ರಾ. ಬೇಜಾರಿಲ್ದೆ ಮದುವೆ ಮನೆಗೆ ಹೋಗೋರ ಹಂಗೆ ಅಲಂಕಾರ ಮಾಡ್ಕಂತಾರೆ. ದೇವರಮಂಟಪ ಎಷ್ಟು ಚೆನ್ನಾಗಿ ಸಿಂಗಾರ ಮಾಡಿರ್ತಾರೆ ಅಂದ್ರೆ ನೋಡೋಕೆ ಎರಡು ಕಣ್ಣು ಸಾಲ್ದು...' ಸೀತಾಲಕ್ಷ್ಮಿ ಈ ಕೌತುಕಗಳನ್ನು ಕೈಲಿ ಹಿಡಿದು ಬರುತ್ತಿದ್ದ ಪನಿವಾರದ ಜೊತೆ ಗಂಡನೊಡನೆ ಹಂಚಿಕೊಳ್ಳುತ್ತಿದ್ದಳು. ಶಿವರಾಮನ ಮೇಲರಿಮೆಗೆ ಮುಕ್ಕಾಗುವಂತಾಗುತ್ತಿತ್ತು.

'ಅದಕ್ಕೇ ಹೇಳಿದ್ದು, ಒಂದಿಷ್ಟು ಒಡವೆ ಮನೇಲಿಟ್ಕಂಡಿರ್ಬೇಕಿತ್ತು ಕಣೇ. ನಿಂಗೇನು ಕಮ್ಮಿಯಾಗಿದೆ ಅಂತ ಬಿಚ್ಕೋಲೆ ಗೌರಮ್ಮನ ಹಂಗಿರ್ಬೇಕು? ತಂದುಕೊಡ್ಲಾ ಹೇಳು'

'ಬ್ಯಾಡ ಮಾರಾಯ್ರೇ, ಮತ್ತೆ ತಗೊಂಡ್ಹೋಗಿ ತೆಗೆದಿಡ್ಬೇಕಲ್ಲ, ಅದೊಂದು ಫಜೀತಿ'

'ಅವತ್ತೇ ಹೇಳ್ದೆ, ಕೇಳಿದ್ಯಾ ನೀನು? ಎಲ್ಲಾ ತಗಂಡ್ಹೋಗಿ ಬೇಕೂಂದ್ಕೂಡ್ಲೆ ಕೈಗೆ ಸಿಗ್ದಿದ್ಹಂಗೆ ಎಲ್ಲೋ ಇಟ್ಟಿದ್ದಾಯ್ತು. ಈಗ್ಲೂ ಹೇಳು, ಒದೆರಡು ನಗ ತಂದ್ಕೊಡ್ತೀನಿ. ಬೀರಲ್ಲಿ ಇಟ್ಕಂಡ್ರಾಯ್ತು'

'ಬ್ಯಾಡ, ಬ್ಯಾಡ. ಪ್ರಸನ್ನ ಬೈತಾನೆ...'

'ಅವನಿಗೆ ಹೆದರ್ಕಂತೀಯನೇ? ಥೂ ನಿನ್ನ...'

'ಹೆದರಿಕೆ ಅಂತಲ್ಲ. ನಮ್ಹತ್ರ ಇಷ್ಟಿದೆ ಅಂತ ತೋರಿಸೋಕೂ ಹೋಗ್ಬಾರ್ದು ಅಂತಾನೆ ಅವನು. ದಿನ ಬೆಳಗಾದ್ರೆ ಟೀವೀಲಿ ನೋಡ್ತಿರ್ತೀರಲ್ಲ, ಅಲ್ಲಿ ಸರ ಎಳ್ಕೊಂಡ್ಹೋದ್ರು, ಇಲ್ಲಿ ಸರ ಎಳ್ಕೊಂಡ್ಹೋದ್ರು ಅಂತ ಸರಗಳ್ಳರ ಸುದ್ದಿ ಬರ್ತಾನೇ ಇರುತ್ತಲ್ಲ?'

'ಊಟಕ್ಕಿಲ್ಲದ ಉಪ್ಪಿನಕಾಯಿ' ಅನ್ನುತ್ತಿದ್ದ ಶಿವರಾಮ.

'ಉಪ್ಪಿನಕಾಯಿ ಇದೇಂತ ನೆನೆಸೊಂಡ್ರಾಯ್ತಪ್ಪಾ. ಎರಡು ತುತ್ತು ಅನ್ನ ಜಾಸ್ತಿ ಇಳಿಯುತ್ತೆ'.

'ನೀನೊಬ್ಬ...' ಹೌದೇ? ಗಂಡನೊಡನೆ ಹೀಗೆ ಸದರವಾಗಿ, ಸರಸವಾಗಿ ಮಾತಾಡುವ ಕಾಲ ಬರುತ್ತದೆಯೆಂದು ತಾನು ಎಣಿಸಿದ್ದಿತ್ತೇ? ಸೀತಾಲಕ್ಷ್ಮಿಗೆ ಅಚ್ಚರಿಯಾಗುತ್ತಿತ್ತು. ಮಗನ ಸಾವು ಅಪ್ಪನನ್ನು ಹಣ್ಣು ಮಾಡಿದೆ, ಪರಸ್ಥಳವಾಸ ಮತ್ತಷ್ಟು ಮೆತ್ತಗಾಗಿಸಿದೆ ಎಂದು ಅವಳ ನಂಬಿಕೆ. ಹಗೆ ಸಾಧಿಸಲು, ಹೊಟ್ಟೆ ಉರಿಸಿಕೊಳ್ಳಲು ಇಲ್ಲಿ ದಾಯಾದಿಗಳಿಲ್ಲ. ಆಶ್ಚರ್ಯವೆನ್ನುವ ಹಾಗೆ ದಿವಸಾ ದೇವಸ್ಥಾನಕ್ಕೆ ಹೋಗುವ ಶಿವರಾಮನಿಗೆ ಅಲ್ಲಿಗೆ ಅವನಂತೆಯೇ ಹಾಜರಿ ಹಾಕುವ ಕೆಲ ಪಿಂಚಣಿದಾರರು ಪರಿಚಿತರಾಗಿದ್ದರು. ಅಂಥವರನ್ನು ಗಂಡ ಮನೆಗೆ ಕರೆದುಕೊಂಡು ಬಂದರೆ ಸೀತಾಲಕ್ಷ್ಮಿ ಅತ್ಯಾದರದಿಂದ ಕಾಫಿಯ ಉಪಚಾರ ಮಾಡಿ ಸತ್ಕರಿಸುತ್ತಿದ್ದಳು. ಈ ವಿಷಯವನ್ನು ರಾತ್ರಿ ದಣಿದು ಮನೆಗೆ ಬರುವ ಪ್ರಸನ್ನನ ಕಿವಿ ತಲುಪಿಸುತ್ತಿದ್ದಳು. ಈ ಇಂಥವರು ಮನೆಗೆ ಬಂದಿದ್ದರು ಎಂದು ಅವಳಿಗೆ ಹೇಳಿಕೊಳ್ಳುವ ಸಡಗರ.

'ಕಾಫಿ ಕೊಟ್ರೆ ದಿನಾ ಯಾರು ಬೇಕಾದ್ರೂ ಬರ್ತಾರೆ...' ಒಂದು ದಿನ ಪ್ರಸನ್ನ ಪ್ರತಿಕ್ರಿಯಿಸಿದ್ದು ಕೇಳಿ ಸೀತಾಲಕ್ಷ್ಮಿಯ ಮುಖ ಪೆಚ್ಚಾಯ್ತು. ಹೌದಾ? ಇರಬಹುದಾ? ಅಂತಲೂ ಅನಿಸಿತು. ಮಗ ಅಪ್ಪನ ಥರ ಕೊಂಕು ಆಗ್ದಿದ್ರೆ ಸಾಕು ಅಂದುಕೊಂಡಿದ್ದಳು ಸೀತಾಲಕ್ಷ್ಮಿ ಅವತ್ತು.

***

ಹೊಸದಾಗಿ ಕಟ್ಟಿದ ಅಪಾರ್ಟ್‌ಮೆಂಟಿನಲ್ಲಿ ಒಂದು ಸ್ವಂತ ಮನೆ ಖರೀದಿಸುವ ಯೋಚನೆ ಮಾಡಿದ ಪ್ರಸನ್ನ. ಬಾಡಿಗೆಗೆ ಕಟ್ಟುವ ದುಡ್ಡು ಸಾಲಕ್ಕೆ ಕಟ್ಟಿದರೆ ಸೈ, ಸ್ವಂತ ಮನೆಯ ಸುಖ. ಬೆಂಗಳೂರು ಪಟ್ಟಣದಲ್ಲಿ ಸ್ವಂತ ಮನೆ ಆಗುತ್ತದೆ ಎನ್ನುವ ವಿಷಯ ಶಿವರಾಮನಿಗೆ ಆಕಾಶದ ತಾರೆ ಕೈಗೆಟುಕಿದಷ್ಟು ಸಂಭ್ರಮ ಉಂಟು ಮಾಡಿತ್ತು. ತಾವು ಊರು ಬಿಟ್ಟು ಬಂದು ಬೀದಿಗೆ ಬೀಳಲಿಲ್ಲ. ಬದಲಿಗೆ ಇಲ್ಲೂ ಮನೆ ಗಿನೆ ಅಂತ ಮಾಡಿಕೊಳ್ಳುತ್ತಿದ್ದೇವೆ. ಬೆಂಗಳೂರಲ್ಲಿ ಮನೆ ಮಾಡಿಕೊಳ್ಳುವುದೆಂದರೆ ಹುಡುಗಾಟ ಅಲ್ಲ ಎಂದು ಒಂಥರಾ ಹಮ್ಮು. ಪ್ರಸನ್ನ ಅಪ್ಪ, ಅಮ್ಮನನ್ನು ಕರೆದುಕೊಂಡು ಹೋಗಿ ತಾನು ಕೊಳ್ಳಬೇಕೆಂದಿದ್ದ ಮನೆ ತೋರಿಸಿಕೊಂಡು ಬಂದ. ಈಗ ಅವರು ಬಾಡಿಗೆಗಿರುವ ಮನೆ ಈ ಹೊಸ ವಿನ್ಯಾಸದ ಮನೆಯೆದುರು ಬರೀ ಬುರ್ನಾಸು. ಬಾಡಿಗೆಗಿದ್ದಿದ್ದು ಹಳೇ ಮನೆ. ಇದು ಹೊಸತಾಗಿ ಕಟ್ಟಿದ್ದು. ಆಧುನಿಕ ಶೈಲಿಯದ್ದು. ಮೂರು ಬೆಡ್ ರೂಮುಗಳು, ದೊಡ್ಡ ಹಾಲ್, ವಿಶಾಲವಾದ ಅಡುಗೆಮನೆ, ಎರಡೆರಡು ಬಾಲ್ಕನಿಗಳು, 'ಅಮ್ಮಾ, ಇಲ್ಲಿ ನೀನು ಪಾಟ್ ಇಟ್ಕೊಂಡು ಗಿಡ ಬೆಳೆಸ್ಕೋಬಹುದು' ಅಂದಿದ್ದ ಪ್ರಸನ್ನ. ಮಗನ ಮಾತು ಕೇಳಿ ಸೀತಾಲಕ್ಷ್ಮಿಗೆ ವಿಪರೀತ ಖುಷಿಯಾಗಿತ್ತು. ಅವಳ ಮನಸ್ಸಿನಲ್ಲಿ ಆಗಲೇ ಪಾಟಿನಲ್ಲಿ ನಳನಳಿಸುತ್ತಿದ್ದ ತುಳಸಿಗಿಡಕ್ಕೆ ದೀಪ ಹಚ್ಚಿಟ್ಟು ನಮಸ್ಕರಿಸಿದ್ದಾಗಿತ್ತು. ಅಲ್ಲಿನ ಫಳಫಳಿಸುವ ನೆಲ, ನುಣ್ಣನೆಯ ಗೋಡೆಗಳನ್ನು ಮುಟ್ಟಿ ಮುಟ್ಟಿ ಸುಖಿಸುವಾಗ ದಪ್ಪದ ಮಣ್ಣಿನ ಗೋಡೆಗಳ ಹಳ್ಳಿಮನೆಯ ನೆನಪೂ ಆಗಿತ್ತು. ಜೊತೆಗೆ ಇನ್ನಿಲ್ಲವಾಗಿರುವ ಮಗನ ನೆನಪೂ. ಒಂದನ್ನು ಕಸಿದುಕೊಂಡರೆ ದೇವರು ಮತ್ತೊಂದನ್ನು ಕೊಡುತ್ತಾನಂತೆ. ತನ್ನ ಕಂದನನ್ನು ಕಸಿದುಕೊಂಡು ಈ ಸೌಭಾಗ್ಯ ಕೊಡಬೇಕಾದ ಅವಶ್ಯಕತೆಯಿರಲಿಲ್ಲ ಅಂದುಕೊಳ್ಳುತ್ತಾ ಕಣ್ಣೊರೆಸಿಕೊಂಡಿದ್ದಳು ಸೀತಾಲಕ್ಷ್ಮಿ.

'ತಗೊಳ್ಳೋದೂಂತಾದ್ರೆ ತಗೊಳ್ಳೋದೇ. ಮೀನಾಮೇಷ ನೋಡೋಕೇನುಂಟು? ಪತ್ರ ಗಿತ್ರ ಸರಿಯಾಗಿದ್ಯಾ ಅಂತ ವಿಚಾರಿಸ್ಕಾ ಅಷ್ಟೇ. ಯಾರನ್ನೂ ನಂಬೋ ಕಾಲ ಅಲ್ಲ'

'ನಂಗೆ ಅಷ್ಟೂ ಗೊತ್ತಿಲ್ವಾ? ಮನೆ ನಿಮಗೆ ಇಷ್ಟವಾದ್ರೆ ಮುಗೀತು...' ಅಪ್ಪನನ್ನು ನೋಡಿ ನಕ್ಕಿದ್ದ ಪ್ರಸನ್ನ.

'ಎಷ್ಟು ಹೇಳ್ತಾರೋ?' ಕುತೂಹಲದಿಂದ ಪ್ರಶ್ನಿಸಿದ್ದ ಶಿವರಾಮ.

'ಹತ್ರತ್ರ ಒಂದು ಕೋಟಿ ಆಗಬಹುದು'

ಗಂಡ, ಹೆಂಡತಿ ಇಬ್ಬರೂ ಕುಮುಟಿ ಬಿದ್ದಿದ್ದರು. ಲಕ್ಷಗಟ್ಟಲೆ ಅಂದರೆ ಭಾರೀ ಮೊತ್ತ ಅಂದುಕೊಂಡವರಿಗೆ ಕೋಟಿಯ ಮಾತು ಕೇಳಿ ಜ್ವರ ಬಂದ ಹಾಗಾಯ್ತು. ಹೇಳಿಯೇಬಿಟ್ಟ ಶಿವರಾಮ, 'ಬ್ಯಾಡ ಮಾರಾಯಾ, ಇಲ್ಲಿಂದ್ಲೇ ಕೈ ಮುಗಿದುಬಿಡೋಣ. ಅಷ್ಟೆಲ್ಲಾ ದುಡ್ಡು ಆಕಾಶದಿಂದ ಉದುರುತ್ತಾ? ಎಲ್ಲಿಗೆ ಕದಿಯೋಕೆ ಹೋಗೋದು?'

ನಕ್ಕ ಪ್ರಸನ್ನ.

'ನೀನು ಈ ಕಾಲಕ್ಕೆ ಲಾಯ್ಕಿಲ್ಲ ಅಪ್ಪಾ. ಇನ್ನೂ ಓಬೀರಾಯನ ಕಾಲದಲ್ಲಿದ್ದಿ' ಅಂದ.

'ಏನೋ ಹಾಗಂದ್ರೆ? ಕೋಟಿಗಟ್ಲೆ ದುಡ್ಡು ಅಂದ್ರೆ ಹುಡುಗಾಟಾನಾ?'

'ಫಸ್ಟ್ ಕ್ಲಾಸ್ ಏರಿಯಾ ಅಪ್ಪಾ. ಇಂತಲ್ಲಿ ಮನೆ ಸಿಗೋಕೆ ಪುಣ್ಯ ಮಾಡಿರ್ಬೇಕು. ನೀನೇನು ಯೋಚನೆ ಮಾಡ್ಬೇಡ. ಬ್ಯಾಂಕಲ್ಲಿ ಸಾಲ ಸಿಗುತ್ತೆ. ಉಳಿತಾಯದ ದುಡ್ಡು ಒಂದಿಷ್ಟಿದೆ. ನನ್ನ ಸಂಬಳದಲ್ಲಿ ಸಾಲದ ಕಂತು ತೀರಿಸೋದು ದೊಡ್ಡ ವಿಷ್ಯ ಅಲ್ಲ'.

'ಸಾಲ ಮಾತ್ರ ಬೇಡ್ವೇಬೇಡ ಮಾರಾಯಾ. ಹೆದ್ರಿಕೆ ಆಗುತ್ತೆ...'

(ಸಶೇಷ)